THE TIMES OF INDIA, MANGALURU
SATURDAY, DECEMBER 4, 2021

# 2 babies undergo complex cardiac surgeries

TIMES NEWS NETWORK

**Manipal:** Kasturba Hospital here has performed complex and critical paediatric cardiac surgeries on two newborn babies. One baby was having aortic arch interruption with a ventricular septal defect while the other was diagnosed with congenital heart disease known as tetralogy of fallot with pulmonary atresia.

Dr Guruprasad Rai, associate professor of cardio thoracic and vascular Surgery, said in the first case, a young Indian couple residing in the Middle East came to know that their baby had a suspected heart defect. It was confirmed in due course of pregnancy and the family approached Kasturba Hospital's paediatric cardiology and cardiac surgery team and shared the scan report.

**AT KASTURBA HOSPITAL**

The couple came to India and delivered the baby at the hospital. The paediatric cardiology team, led by Dr Gunjan Banga, confirmed the baby had aortic arch interruption with a ventricular septal defect, which can be fatal if not treated in time. The baby was stabilised by neonatologist Dr Leslie Lewis and team, and operated on by chief cardiac surgeon Dr Arvind Bishnoi in the first week of its birth. The baby got discharged in 10 days.

In the second case, a newborn from Shivamogga district got admitted to the hospital due to suspicion of a heart disease. The mother had a normal pregnancy but the heart condition was missed during the antenatal scan. After delivery, the baby was noted to be appearing blue and also lacked oxygen.

The baby had tetralogy of fallot with pulmonary atresia. A large hole in the heart was causing mixing of blood in the heart besides no flow to the lung artery.

A cardiac catheterisation was performed by a team led by Dr Padmakumar R, interventional cardiologist and Dr Arvind Bishnoi, paediatric cardiothoracic surgeon. This procedure was performed through a needle hole in a small blood vessel in the baby's leg. A stent was then placed in the patent ductus arteriosus (PDA) to keep it open and the patient was discharged within a week.

ಪ್ರಜಾವಾಣಿ ಶನಿವಾರ • ಡಿಸೆಂಬರ್ 4, 2021

• ತೆರೆದ ಹೃದಯ ಶಸ್ತ್ರಚಿಕಿತ್ಸೆ ಬದಲು ಪರ್ಯಾಯ ಚಿಕಿತ್ಸಾ ಕ್ರಮ • ಸಂಕೀರ್ಣ ಕಾಯಿಲೆಗಳಿಗೂ ಮಣಿಪಾಲದಲ್ಲಿ ಆರೈಕೆ

# ಕೆಎಂಸಿ: ನವಜಾತ ಶಿಶುಗಳಿಗೆ ಯಶಸ್ವಿ ಹೃದಯ ಶಸ್ತ್ರಚಿಕಿತ್ಸೆ

ಪ್ರಜಾವಾಣಿ ವಾರ್ತೆ

ಉಡುಪಿ: 'ಮಣಿಪಾಲದ ಕಸ್ತೂರಬಾ ಆಸ್ಪತ್ರೆಯಲ್ಲಿ ಈಚೆಗೆ ನವಜಾತ ಶಿಶುಗಳಿಗೆ ಅಪರೂಪದ ಹಾಗೂ ತೀರಾ ಸಂಕೀರ್ಣವಾದ ಹೃದಯ ಶಸ್ತ್ರಚಿಕಿತ್ಸೆಗಳು ಯಶಸ್ವಿಯಾಗಿ ನಡೆದಿವೆ' ಎಂದು ಕೆಎಂಸಿ ಹೃದಯ ಶಸ್ತ್ರಚಿಕಿತ್ಸಾ ವಿಭಾಗದ ಪ್ರಾಧ್ಯಾಪಕ ಡಾ.ಅರವಿಂದ್ ಬಿಷ್ಣೋಯ್ ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾಹಿತಿ ನೀಡಿದರು.

**ಪ್ರಕರಣ 1:**
ಶಿವಮೊಗ್ಗ ಜಿಲ್ಲೆಯ ಮಹಿಳೆಯೊಬ್ಬರಿಗೆ ಜನಿಸಿದ್ದ ನವಜಾತ ಶಿಶುವಿಗೆ ಹೃದಯದಲ್ಲಿ ಸಮಸ್ಯೆ ಕಾಣಿಸಿಕೊಂಡಿತ್ತು. ಡಾ. ಲೆಸ್ಲಿ ಲೂಯಿಸ್ ಹಾಗೂ ಡಾ.ಗುಂಜನ್ ಬಂಗಾ ನೇತೃತ್ವದ ತಂಡ ಮಗುವಿನ ಶ್ವಾಸಕೋಶದಲ್ಲಿದ್ದ ರಂಧ್ರವನ್ನು ಪತ್ತೆ ಹಚ್ಚಿ, ಮಗುವಿನ ಕಾಲಿನ ಸಣ್ಣ ರಕ್ತನಾಳದ ರಂಧ್ರದ ಮೂಲಕ ಚಿಕಿತ್ಸೆ ನೀಡಿ, ಪಿಡಿಎನಲ್ಲಿ ಸ್ಟೆಂಟ್ ಇರಿಸಿತು. 6 ತಿಂಗಳ ನಂತರ ಶಸ್ತ್ರಚಿಕಿತ್ಸೆ ಮಾಡುವ ತೀರ್ಮಾನದೊಂದಿಗೆ ಮಗುವನ್ನು ಆಸ್ಪತ್ರೆಯಿಂದ ಬಿಡುಗಡೆ ಮಾಡಲಾಯಿತು. ನವಜಾತ ಶಿಶುಗಳಿಗೆ ತೆರೆದ ಹೃದಯ ಶಸ್ತ್ರಚಿಕಿತ್ಸೆ ಮಾಡದೆ ಪರ್ಯಾಯ ಚಿಕಿತ್ಸಾ ಕ್ರಮ ಅನುಸರಿಸಲಾಯಿತು.

**ಪ್ರಕರಣ 2:**
ವಿದೇಶದಲ್ಲಿ ನೆಲೆಸಿದ್ದ ಭಾರತೀಯ ಮಹಿಳೆಯ ಗರ್ಭದಲ್ಲಿದ್ದ ಮಗುವಿಗೆ ಹೃದ್ರೋಗ ಕಾಣಿಸಿಕೊಂಡು, ಮಗು ಜನಿಸಿದ ಕೆಲವೇ ದಿನಗಳಲ್ಲಿ ಸಂಕೀರ್ಣ ಹೃದಯ ಶಸ್ತ್ರಚಿಕಿತ್ಸೆ ಮಾಡಬೇಕಾದ ಅನಿವಾರ್ಯತೆ ಇತ್ತು. ದಂಪತಿ ಕಸ್ತೂರಬಾ ಆಸ್ಪತ್ರೆಗೆ ದಾಖಲಾದ ಬಳಿಕ, ಡಾ. ಗುಂಜನ್ ಬಂಗಾ ನೇತೃತ್ವದ ಮಕ್ಕಳ ಹೃದ್ರೋಗ ತಂಡವು ಮಗುವಿಗಿದ್ದ ದೋಷವನ್ನು ಪತ್ತೆ ಹಚ್ಚಿತು. ದಂಪತಿಗೆ ಮಗು ಜನಿಸಿ ಮೊದಲ ವಾರದಲ್ಲಿಯೇ ಡಾ. ಲೆಸ್ಲಿ ಲೂಯಿಸ್ ನೇತೃತ್ವದ ತಂಡ ಹಾಗೂ ಡಾ.ಅರವಿಂದ್ ಬಿಷ್ಣೋಯ್ ನೇತೃತ್ವದ ತಂಡ ನವಜಾತ ಶಿಶುವಿಗೆ ಯಶಸ್ವಿ ಶಸ್ತ್ರಚಿಕಿತ್ಸೆ ನಡೆಸಿತು.

'ದೇಶದ ಪ್ರತಿಷ್ಠಿತ ಆಸ್ಪತ್ರೆಯಲ್ಲಿ ದೊರೆಯುವ ಎಲ್ಲ ಸೌಲಭ್ಯಗಳು ಕೆಎಂಸಿಯಲ್ಲಿ ಲಭಿಸುತ್ತಿದೆ. ಪ್ರಸೂತಿ, ಪಿಡಿಯಾಟ್ರಿಕ್ಸ್, ಕಾರ್ಡಿಯಾಲಜಿ, ಕಾರ್ಡಿಯಾಕ್ ಸರ್ಜರಿ, ಅರಿವಳಿಕೆ ವಿಭಾಗ ಮತ್ತು ಹೃದಯ ರಕ್ತನಾಳದ ತಂತ್ರಜ್ಞಾನ ವಿಭಾಗ ಆಸ್ಪತ್ರೆಯಲ್ಲಿದ್ದು ನವಜಾತ ಶಿಶುಗಳಲ್ಲಿ ಕಾಣಿಸಿಕೊಳ್ಳುವ ಹೃದ್ರೋಗವನ್ನು ಪತ್ತೆಹಚ್ಚಿ ಚಿಕಿತ್ಸೆ ನೀಡಲು ಸಾಧ್ಯವಾಗುತ್ತಿದೆ' ಎಂದು ನವಜಾತ ಶಿಶು ವಿಭಾಗ ಮತ್ತು ಮಕ್ಕಳ ವಿಭಾಗದ ಮುಖ್ಯಸ್ಥ ಡಾ.ಲೆಸ್ಲಿ ಎಡ್ವರ್ಡ್ ಲೆವಿಸ್ ಹೇಳಿದರು.



ಮಣಿಪಾಲದ ಕಸ್ತೂರಬಾ ಆಸ್ಪತ್ರೆಯಲ್ಲಿ ಈಚೆಗೆ ನವಜಾತ ಶಿಶುಗಳಿಗೆ ನಡೆದ ಹೃದಯ ಶಸ್ತ್ರಚಿಕಿತ್ಸೆ ಕುರಿತು ಹೃದಯ ಶಸ್ತ್ರಚಿಕಿತ್ಸಾ ವಿಭಾಗದ ಪ್ರಾಧ್ಯಾಪಕ ಡಾ.ಅರವಿಂದ್ ಬಿಷ್ಣೋಯ್ ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾಹಿತಿ ನೀಡಿದರು.

ಮಕ್ಕಳ ಹೃದ್ರೋಗ ತಜ್ಞೆ ಡಾ. ಗುಂಜನ್ ಬಂಗಾ ಮಾತನಾಡಿ, 'ಕಸ್ತೂರಬಾ ಆಸ್ಪತ್ರೆಯಲ್ಲಿ ಪ್ರಸವಪೂರ್ವ ಮತ್ತು ಜನನ ನಂತರದಲ್ಲಿ ಕಾಣಿಸಿಕೊಳ್ಳುವ ಸಂಕೀರ್ಣ ಹೃದ್ರೋಗಕ್ಕೆ ಅಗತ್ಯ ಚಿಕಿತ್ಸೆ ಹಾಗೂ ಆರೈಕೆ ನೀಡಲಾಗುತ್ತಿದೆ. ನವಜಾತ ಶಿಶುಗಳಲ್ಲಿ ರೋಗವನ್ನು ಶೀಘ್ರ ಪತ್ತೆ ಹಚ್ಚಿ ಚಿಕಿತ್ಸೆ ನೀಡಿದರೆ ಉತ್ತಮ ಫಲಿತಾಂಶ ಸಿಗುತ್ತದೆ' ಎಂದರು.

ಆಸ್ಪತ್ರೆಯ ವೈದ್ಯಕೀಯ ಅಧೀಕ್ಷಕ ಡಾ.ಅವಿನಾಶ್ ಶೆಟ್ಟಿ ಮಾತನಾಡಿ, 'ಕಸ್ತೂರಬಾ ಆಸ್ಪತ್ರೆ ಕರಾವಳಿ ಮತ್ತು ಮಧ್ಯ ಕರ್ನಾಟಕ ಭಾಗದಲ್ಲಿ ಹೃದ್ರೋಗ ಮತ್ತು ಹೃದಯ ಶಸ್ತ್ರಚಿಕಿತ್ಸಾ ಸೇವೆಗಳನ್ನು ನೀಡುವಲ್ಲಿ ಮುಂಚೂಣಿಯಲ್ಲಿದೆ. ಆಸ್ಪತ್ರೆಯಲ್ಲಿ ಸಿಗುವ ಸೌಲಭ್ಯಗಳನ್ನು ಬಳಸಿಕೊಂಡು ಜನ್ಮಜಾತ ಹೃದಯ ಕಾಯಿಲೆಯನ್ನು ಜಯಿಸಬಹುದು' ಎಂದರು.

ಸುದ್ದಿಗೋಷ್ಠಿಯಲ್ಲಿ ಹೃದ್ರೋಗ ವಿಭಾಗ ಮುಖ್ಯಸ್ಥ ಡಾ.ಪದ್ಮಕುಮಾರ್, ನವಜಾತ ಶಿಶು ವಿಭಾಗದ ಡಾ. ಅಪೂರ್ವ್ ಬರ್ಚೆ ಇದ್ದರು.

## 'ಬೆಂಗಳೂರಿಗೆ ಹೋಗುವ ಅಗತ್ಯವಿಲ್ಲ'

'ಹಿಂದೆ ಸಂಕೀರ್ಣವಾದ ಹೃದಯ ಕಾಯಿಲೆ ಹೊಂದಿರುವ ಶಿಶುಗಳನ್ನು ಶಸ್ತ್ರಚಿಕಿತ್ಸೆಗೆ ಬೆಂಗಳೂರಿಗೆ ಕಳುಹಿಸಲಾಗುತ್ತಿತ್ತು. ಆಸ್ಪತ್ರೆಗೆ ಸಾಗಿಸುವ ಮಾರ್ಗಮಧ್ಯೆ ಶಿಶುಗಳು ಸಾವನ್ನಪ್ಪಿದ ಕಹಿ ಘಟನೆಗಳು ನಡೆಯುತ್ತಿದ್ದವು. ಇದೀಗ ಕೆಎಂಸಿಯಲ್ಲಿ ನವಜಾತ ಹಾಗೂ ಚಿಕ್ಕ ಶಿಶುಗಳಲ್ಲಿ ಸಂಕೀರ್ಣ ಹುಟ್ಟಿನಿಂದಲೇ ಕಾಣಿಸಿಕೊಂಡ ಹೃದ್ರೋಗಕ್ಕೆ ಚಿಕಿತ್ಸೆ ನೀಡಲಾಗುತ್ತಿದ್ದು, ನೆರೆಯ 8 ಜಿಲ್ಲೆಗಳಲ್ಲಿ ಹೃದ್ರೋಗ ಸಮಸ್ಯೆಯಿಂದ ನರಳುತ್ತಿರುವ ಶಿಶುಗಳಿಗೆ ಕಸ್ತೂರಬಾ ಆಸ್ಪತ್ರೆಯಲ್ಲಿ ಚಿಕಿತ್ಸೆ ನೀಡಲಾಗುತ್ತಿದೆ' ಎಂದು ನವಜಾತ ಶಿಶು ವಿಭಾಗದ ಮುಖ್ಯಸ್ಥ ಡಾ.ಲೆಸ್ಲಿ ಎಡ್ವರ್ಡ್ ಲೆವಿಸ್ ಹೇಳಿದರು.

4-12-2021
UDAYAVANI - MANIPAL

## ಮಣಿಪಾಲ ಕೆಎಂಸಿ ಆಸ್ಪತ್ರೆ

# ಮಕ್ಕಳ ಸಂಕೀರ್ಣ ಹೃದಯ ಶಸ್ತ್ರಚಿಕಿತ್ಸೆ ಯಶಸ್ವಿ

ಉಡುಪಿ, ಡಿ. 3: ಮಣಿಪಾಲ ಕಸ್ತೂರ್ಬಾ ಆಸ್ಪತ್ರೆಯಲ್ಲಿ ಹೃದ್ರೋಗ ಸಮಸ್ಯೆಯಿದ್ದ ಪ್ರಕರಣಗಳಿಗೆ ಸಂಬಂಧಿಸಿ ಸಂಕೀರ್ಣ ಹೃದಯ ಶಸ್ತ್ರಚಿಕಿತ್ಸೆ ಯಶಸ್ವಿಯಾಗಿದೆ ಎಂದು ಹೃದಯ, ರಕ್ತನಾಳ ಮತ್ತು ಶ್ವಾಸಕೋಶ ಶಸ್ತ್ರಚಿಕಿತ್ಸೆ ವಿಭಾಗದ ಸಹ ಪ್ರಾಧ್ಯಾಪಕ ಡಾ। ಗುರುಪ್ರಸಾದ್ ರೈ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

ಮಧ್ಯಪ್ರಾಚ್ಯ ರಾಷ್ಟ್ರದಲ್ಲಿ ನೆಲೆಸಿದ್ದ ಭಾರತೀಯ ಯುವ ದಂಪತಿಯ ಕೆಲವೇ ತಿಂಗಳ ಮಗುವಿಗೆ ಪರೀಕ್ಷೆ ವೇಳೆ ಸಂಕೀರ್ಣ ಹೃದಯ ಶಸ್ತ್ರಚಿಕಿತ್ಸೆಯ ಅಗತ್ಯವಿರುವುದು ಗರ್ಭಾವಸ್ಥೆಯ ಅವಧಿಯಲ್ಲಿ ದೃಢಪಟ್ಟಿತ್ತು. ಕುಹರದ ಸೆಪ್ಟಲ್ ದೋಷದೊಂದಿಗೆ ಮಹಾಪಧಮನಿಯ ಕಮಾನುವಿನಲ್ಲಿ ಅಡಚಣೆ ಇತ್ತು. ಸಮಯಕ್ಕೆ ಚಿಕಿತ್ಸೆ ನೀಡದಿದ್ದರೆ ಮಾರಕವಾಗುವ ಸಂಭವವಿತ್ತು.

ನವಜಾತ ಶಿಶು ವಿಭಾಗದ ತಂಡವು ಔಷಧಗಳೊಂದಿಗೆ ಸ್ಥಿರಗೊಳಿಸಿ, ಹುಟ್ಟಿದ ಮೊದಲ ವಾರದಲ್ಲಿ ಶಸ್ತ್ರಚಿಕಿತ್ಸೆ ನಡೆಸಲಾಯಿತು. ಮಗುವನ್ನು ಶಸ್ತ್ರಚಿಕಿತ್ಸೆಯ ಅನಂತರ 10 ದಿನಗಳಲ್ಲಿ ಆಸ್ಪತ್ರೆಯಿಂದ ಮನೆಗೆ ಬಿಡುಗಡೆ ಮಾಡಲಾಯಿತು ಎಂದು ಮಾಹಿತಿ ನೀಡಿದರು. ಅದೇ ರೀತಿಯಲ್ಲಿ ಶಿವಮೊಗ್ಗ ಮೂಲದ ದಂಪತಿಯ ಮಗುವಿಗೂ ಸಂಕೀರ್ಣ ಹೃದಯ ಚಿಕಿತ್ಸೆ ಯಶಸ್ವಿಯಾಗಿ ನಡೆದಿದೆ ಎಂದರು.

ವೈದ್ಯಕೀಯ ಅಧೀಕ್ಷಕ ಡಾ। ಅವಿನಾಶ್ ಶೆಟ್ಟಿ ಮಾತನಾಡಿ, ಮಣಿಪಾಲ ಆಸ್ಪತ್ರೆ ಕರಾವಳಿ ಮತ್ತು ಮಧ್ಯ ಕರ್ನಾಟಕದಲ್ಲಿ ಹೃದ್ರೋಗ ಮತ್ತು ಹೃದಯ ಶಸ್ತ್ರಚಿಕಿತ್ಸಾ ಸೇವೆಗಳಲ್ಲಿ ಮುಂಚೂಣಿಯಲ್ಲಿದೆ. ಪ್ರಪಂಚದ ಯಾವುದೇ ಕೇಂದ್ರದಲ್ಲಿ ಲಭ್ಯವಿರುವ ಎಲ್ಲ ರೀತಿಯ ಹೃದಯ ಚಿಕಿತ್ಸೆಯನ್ನು ಇಲ್ಲಿ ನೀಡಲಾಗುತ್ತಿದೆ ಎಂದು ತಿಳಿಸಿದರು.

ನವಜಾತ ಶಿಶು ವಿಭಾಗ ಮತ್ತು ಮಕ್ಕಳ ವಿಭಾಗದ ಮುಖ್ಯಸ್ಥ ಡಾ। ಲೆಸ್ಲಿ ಎಡ್ವರ್ಡ್ ಲೆವಿಸ್ ಮಾತನಾಡಿ, ಈ ಹಿಂದೆ ನವಜಾತ ಶಿಶುಗಳ ಸಂಕೀರ್ಣ ಹೃದಯ ಚಿಕಿತ್ಸೆಗೆ ಬೆಂಗಳೂರಿಗೆ ಕಳುಹಿಸಬೇಕಿತ್ತು.

ಪ್ರಸ್ತುತ ಮಣಿಪಾಲ ಕೆಎಂಸಿಯಲ್ಲಿ ಆಡಳಿತ ವರ್ಗವು ಅತ್ಯುತ್ತಮ ಮೂಲಸೌಕರ್ಯ, ಮಲ್ಟಿ ಡಿಸಿಪ್ಲಿನರಿ ತಂಡ ಒದಗಿಸಿ ಸಂಪೂರ್ಣ ಬೆಂಬಲ ನೀಡಿದ ಪರಿಣಾಮ 8 ಅಕ್ಕಪಕ್ಕದ ಜಿಲ್ಲೆವ್ಯಾಪ್ತಿಗೆ ಶಿಶುಗಳಿಗೆ ಹೃದ್ರೋಗ ಸಂಬಂಧಿಸಿದ ಚಿಕಿತ್ಸೆ ನೀಡಲು ಸಹಕಾರಿಯಾಗಿದೆ ಎಂದರು.

ಆಸ್ಪತ್ರೆ ಹೃದಯ ಶಸ್ತ್ರಚಿಕಿತ್ಸಾ ವಿಭಾಗದ ಪ್ರಾಧ್ಯಾಪಕ ಡಾ। ಅರವಿಂದ್ ಬಿಷ್ಣೋಯ್, ಪ್ರಮುಖ ವೈದ್ಯರಾದ ಡಾ। ಅಪುರ್ವ್ ಬರ್ಚೆ, ಡಾ। ಗುಂಜನ್ ಬಂಗ ಪತ್ರಿಕಾಗೋಷ್ಠಿಯಲ್ಲಿದ್ದರು.

### ಕೋವಿಡ್ ಬಳಿಕ ಶೇ. 20 ಹೃದ್ರೋಗ ಪತ್ತೆ

**ಕೋವಿಡ್ ಬಳಿಕ ಶೇ. 10ರಿಂದ 20 ಜನರಲ್ಲಿ ಹೃದ್ರೋಗ ಸಮಸ್ಯೆ ಪತ್ತೆಯಾಗಿದೆ ಎಂದು ಮಣಿಪಾಲ ಆಸ್ಪತ್ರೆ ಹೃದ್ರೋಗ ತಜ್ಞ ಡಾ। ಪದ್ಮಕುಮಾರ್ ತಿಳಿಸಿದರು. ಚಿತ್ರ ನಟ ಪುನೀತ್ ರಾಜ್‌ಕುಮಾರ್ ಸಾವಿನ ಬಳಿಕ ಆಸ್ಪತ್ರೆಯಲ್ಲಿ ಹೃದ್ರೋಗ ಪರೀಕ್ಷೆಗೊಳಪಡುವವರ ಸಂಖ್ಯೆ ಶೇ. 30ರಿಂದ 40ರಷ್ಟಿದೆ ಎನ್ನುವುದು ತಿಳಿದುಬಂದಿದೆ. ಗಾಬರಿಯಿಂದ ಎಲ್ಲರೂ ಪರೀಕ್ಷೆಗೊಳಪಡುವ ಅಗತ್ಯವಿಲ್ಲ, ಲಕ್ಷಣ ಇರುವವರು ಪರೀಕ್ಷೆ ಮಾಡಿಸಬೇಕು. ನಿತ್ಯಜೀವನದಲ್ಲಿ ಲಘು ವ್ಯಾಯಾಮ ಅಗತ್ಯ ಎಂದು ಸಲಹೆ ನೀಡಿದರು.**

ವಿಜಯವಾಣಿ
VIJAYAVANI » MANGALURU
ಶನಿವಾರ 4 ಡಿಸೆಂಬರ್ 2021
4 DECEMBER 2021

# ಕೆಎಂಸಿಯಲ್ಲಿ ಮಕ್ಕಳ ಸಮಗ್ರ ಹೃದ್ರೋಗ ಚಿಕಿತ್ಸಾ ವಿಭಾಗ

■ ವಿಜಯವಾಣಿ ಸುದ್ದಿಜಾಲ ಉಡುಪಿ

ಜನ್ಮಜಾತ ಹೃದಯ ಕಾಯಿಲೆ ಹೊಂದಿರುವ ಮಕ್ಕಳ ಚಿಕಿತ್ಸೆಗಾಗಿ ಕೆಎಂಸಿಯಲ್ಲಿ ಸಮಗ್ರ ಚಿಕಿತ್ಸೆಯ ಘಟಕ ಪ್ರಾರಂಭಿಸಲಾಗಿದೆ ಎಂದು ಮಣಿಪಾಲ ಕಸ್ತೂರ್ಬಾ ಆಸ್ಪತ್ರೆ ವೈದ್ಯಕೀಯ ಅಧೀಕ್ಷಕ ಡಾ.ಅವಿನಾಶ್ ಶೆಟ್ಟಿ ಹೇಳಿದರು.

ಹಿಂದೆ ಸಂಕೀರ್ಣ ಜನ್ಮಜಾತ ಹೃದಯ ಕಾಯಿಲೆ ಹೊಂದಿರುವ ಶಿಶುಗಳನ್ನು ವಿಮಾನ ಅಥವಾ ರಸ್ತೆ ಮೂಲಕ ಹೃದಯ ಶಸ್ತ್ರಚಿಕಿತ್ಸೆಗಾಗಿ ಬೆಂಗಳೂರಿಗೆ ಕಳುಹಿಸುತ್ತಿದ್ದೆವು. ಅನಾರೋಗ್ಯದಿಂದ ಬೆಂಗಳೂರಿಗೆ ತೆರಳುವ ಮಾರ್ಗ ಮಧ್ಯೆ ಶಿಶುಗಳು ಮರಣವನ್ನಪ್ಪುತ್ತಿದ್ದವು. ಇದನ್ನು ಗಮನಿಸಿ ಸಮಗ್ರ ಚಿಕಿತ್ಸೆಯ ಘಟಕ ಪ್ರಾರಂಭಿಸಲಾಗಿದೆ ಎಂದು ಅವರು ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಮಕ್ಕಳ ಹೃದ್ರೋಗ ಚಿಕಿತ್ಸೆ ಸಂಕೀರ್ಣ ಪ್ರಕ್ರಿಯೆಯಾಗಿದ್ದು, 7 ರಿಂದ 8 ವಿಭಾಗಗಳ ಪಾತ್ರವಿದೆ. ಪ್ರಸೂತಿ, ಪೀಡಿಯಾಟ್ರಿಕ್ಸ್, ಕಾರ್ಡಿಯಾಲಜಿ, ಕಾರ್ಡಿಯಾಕ್ ಸರ್ಜರಿ, ಅರಿವಳಿಕೆ ವಿಭಾಗ ಮತ್ತು ಹೃದಯ ರಕ್ತನಾಳದ ತಂತ್ರಜ್ಞಾನ ವಿಭಾಗಗಳು ಜತೆಯಾಗಿ ಕಾರ್ಯನಿರ್ವಹಿಸಬೇಕಿದೆ. ಹೃದಯರಕ್ತನಾಳದ ತಂತ್ರಜ್ಞಾನ ವಿಭಾಗ ಜನ್ಮಜಾತ ಹೃದ್ರೋಗ ಪತ್ತೆಹಚ್ಚುವಲ್ಲಿ ಮತ್ತು ಆರಂಭಿಕ ಚಿಕಿತ್ಸೆ ಒದಗಿಸಲು ಸಹಾಯ ಮಾಡುತ್ತದೆ ಎಂದರು.

ನವಜಾತ ಶಿಶು ವಿಭಾಗ ಮತ್ತು ಮಕ್ಕಳ ವಿಭಾಗದ ಮುಖ್ಯಸ್ಥ ಡಾ. ಲೆಸ್ಲಿ ಎಡ್ವರ್ಡ್ ಲೆವಿಸ್, ನವಜಾತ ಶಿಶುಗಳು ಮತ್ತು ಚಿಕ್ಕ ಶಿಶುಗಳಲ್ಲಿ ಸಂಕೀರ್ಣವಾದ ಜನ್ಮಜಾತ ಹೃದ್ರೋಗ ನಿಭಾಯಿಸಲು ಕಸ್ತೂರ್ಬಾ ಆಸ್ಪತ್ರೆಯಲ್ಲಿ 'ಮಕ್ಕಳ ಹೃದ್ರೋಗ' ತಂಡವನ್ನು ಅಭಿವೃದ್ಧಿಪಡಿಸುವುದು ಕನಸಾಗಿತ್ತು. ಇದಕ್ಕೆ ಅಗತ್ಯವಿರುವ ಮೂಲಸೌಕರ್ಯ ಮತ್ತು ಅತ್ಯುತ್ತಮ ಮಲ್ಟಿಡಿಸಿಪ್ಲಿನರಿ ತಂಡ ಒದಗಿಸುವಲ್ಲಿ ಆಡಳಿತ ಪೂರ್ಣ ಬೆಂಬಲ ನೀಡಿದೆ. ಇಂದು ಕೆಎಂಸಿ ನೆರೆಯ 8 ಜಿಲ್ಲೆಗಳಿಂದ ಆಗಮಿಸುವ ಸಂಕೀರ್ಣವಾದ ಜನ್ಮಜಾತ ಹೃದ್ರೋಗ ಹೊಂದಿರುವ ಶಿಶುಗಳಿಗೆ ಚಿಕಿತ್ಸೆ ನೀಡುತ್ತಿದೆ. ಯಾವುದೇ ಮುಂದುವರಿದ ದೇಶದಲ್ಲಿರುವ ಪೀಡಿಯಾಟ್ರಿಕ್ ಕಾರ್ಡಿಯಾಕ್ ಕೇರ್ ಸೆಂಟರ್‌ಗೆ ಹೋಲಿಸಬಹುದಾದ ಅತ್ಯುತ್ತಮ ಫಲಿತಾಂಶ ನೀಡಲಾಗುತ್ತಿದೆ ಎಂದರು.

ಹೃದ್ರೋಗ ವಿಭಾಗ ಮುಖ್ಯಸ್ಥ ಡಾ. ಪದ್ಮಕುಮಾರ್ ಮಾತನಾಡಿ, ಕೋವಿಡ್ ಸೋಂಕಿಗೆ ಒಳಗಾದ ಕೆಲವರಲ್ಲಿ ರಕ್ತ ಹೆಪ್ಪುಗಟ್ಟುವಿಕೆ ಕಂಡುಬರುತ್ತದೆ. ಇದಕ್ಕೆ 4 ರಿಂದ 6 ವಾರಗಳ ಚಿಕಿತ್ಸೆ ಅಗತ್ಯವಿದೆ. ಇತ್ತೀಚೆಗೆ ಹೊರ ರೋಗಿ ವಿಭಾಗದಲ್ಲಿ ಹೃದಯ ತಪಾಸಣೆಗೆ ಬರುವವರ ಸಂಖ್ಯೆ ಶೇ. 30ರಷ್ಟು ಏರಿಕೆಯಾಗಿದೆ. ನಿಯಮಿತ ವ್ಯಾಯಾಮದಿಂದ ಯಾವುದೇ ತೊಂದರೆಯಿಲ್ಲ. ತುಂಬಾ ಕಠಿಣ ವ್ಯಾಯಾಮಗಳಿಂದ ರಕ್ತದೊತ್ತಡದಲ್ಲಿ ಏರುಪೇರಾಗುವ ಸಾಧ್ಯತೆಗಳಿರುತ್ತವೆ ಎಂದು ತಿಳಿಸಿದರು. ಸುದ್ದಿಗೋಷ್ಠಿಯಲ್ಲಿ ಹೃದಯ ರಕ್ತನಾಳ ಮತ್ತು ಶ್ವಾಸಕೋಶ ಶಸ್ತ್ರಚಿಕಿತ್ಸೆ ವಿಭಾಗದ ಪ್ರಾಧ್ಯಾಪಕ ಡಾ. ಅರವಿಂದ್ ಬಿಷ್ಣೋಯ್, ಸಹ ಪ್ರಾಧ್ಯಾಪಕ ಡಾ. ಗುರುಪ್ರಸಾದ್ ರೈ, ಮಕ್ಕಳ ಹೃದ್ರೋಗ ತಜ್ಞೆ ಡಾ. ಗುಂಜನ್ ಬಂಗಾ, ನವಜಾತ ಶಿಶು ವಿಭಾಗದ ಡಾ. ಅಪೂರ್ವ ಬರ್ಚೆ ಉಪಸ್ಥಿತರಿದ್ದರು.



# ಕಸ್ತೂರ್ಬಾ ಆಸ್ಪತ್ರೆಯಲ್ಲಿ ಮಕ್ಕಳ ಹೃದಯ ಶಸ್ತ್ರಚಿಕಿತ್ಸೆ ಯಶಸ್ವಿ

• ಕನ್ನಡಪ್ರಭ ವಾರ್ತೆ ಮಣಿಪಾಲ

ಕಸ್ತೂರ್ಬಾ ವೈದ್ಯಕೀಯ ಆಸ್ಪತ್ರೆಯಲ್ಲಿ ಇತ್ತೀಚೆಗೆ ಹುಟ್ಟುವಾಗಲೇ ಹೃದಯದ ಕಾಯಿಲೆ ಇದ್ದ 2 ನವಜಾತ ಶಿಶುಗಳಿಗೆ ಯಶಸ್ವಿಯಾಗಿ ತಮ್ಮ ವೈದ್ಯರ ತಂಡ ಶಸ್ತ್ರಚಿಕಿತ್ಸೆಯನ್ನು ನಡೆಸಿದೆ. ಮಕ್ಕಳಿಬ್ಬರೂ ಆರೋಗ್ಯಯುತರಾಗಿದ್ದಾರೆ. ವಿಶ್ವದ ಯಾವುದೇ ಹೃದ್ರೋಗ ಚಿಕಿತ್ಸಾ ಕೇಂದ್ರಕ್ಕೆ ಕಡಿಮೆ ಇಲ್ಲದ ಕೇಂದ್ರವನ್ನು ಈಗ ಕಸ್ತೂರ್ಬಾ ಆಸ್ಪತ್ರೆ ಹೊಂದಿದೆ ಎಂದು ಆಸ್ಪತ್ರೆಯ ವೈದ್ಯಕೀಯ ಅಧೀಕ್ಷಕ ಡಾ. ಅವಿನಾಶ್ ಶೆಟ್ಟಿ ಹೇಳಿದ್ದಾರೆ.

ಸುದ್ದಿಗೋಷ್ಠಿಯಲ್ಲಿ ಡಾ. ಅವಿನಾಶ್ ಮತ್ತು ಆಸ್ಪತ್ರೆಯ ಹೃದ್ರೋಗ ವಿಭಾಗದ ತಜ್ಞರು ನವಜಾತ ಶಿಶುಗಳಲ್ಲಿ ಹೃದ್ರೋಗದ ಚಿಕಿತ್ಸೆಯ ಬಗ್ಗೆ ಮಾಹಿತಿ ನೀಡಿದರು. ವಿದೇಶದಲ್ಲಿ ನೆಲೆಸಿರುವ ದಂಪತಿಯ ಮಗುವಿನ ಗರ್ಭಾವಸ್ಥೆಯಲ್ಲಿಯೇ ಹೃದಯದ ತೊಂದರೆ ಗುರುತಿಸಲಾಗಿತ್ತು. ಹುಟ್ಟಿದ ಕೂಡಲೇ ಮಗುವಿನ ಮಹಾಪಧಮನಿಯ ರಕ್ತಚಲನೆಯ ಅಡಚಣೆಯನ್ನು ಕ್ಲಿಷ್ಟಕರ ಶಸ್ತ್ರಚಿಕಿತ್ಸೆಯಿಂದ ನಿವಾರಿಸಲಾಯಿತು. ಶಿವಮೊಗ್ಗದ ದಂಪತಿಯ ಮಗುವಿಗೆ ಶಸ್ತ್ರಚಿಕಿತ್ಸೆ ಮಾಡದೆ, ಅದರ ಕಾಲಿನ ರಕ್ತನಾಳದಲ್ಲಿ ಸೂಜಿರಂಧ್ರದ ಮೂಲಕ ಸ್ಟಂಟ್ ಹಾಕಲಾಯಿತು. ಇಂತಹ ಅನೇಕ ಪ್ರಕರಣಗಳನ್ನು ಯಶಸ್ವಿಯಾಗಿ ನಿರ್ವಹಿಸಲಾಗಿದೆ ಎಂದು ಹೃದ್ರೋಗ ವಿಭಾಗದ ಮುಖ್ಯಸ್ಥ ಡಾ. ಪದ್ಮಕುಮಾರ್ ಹೇಳಿದರು.

ಈ ಸಂದರ್ಭದಲ್ಲಿ ಮಕ್ಕಳ ಈ ಶಸ್ತ್ರಚಿಕಿತ್ಸೆಗಳನ್ನು ನಡೆಸಿದ ಡಾ. ಅರವಿಂದ್ ಬಿಷ್ಣೋಯ್, ಈ ಚಿಕಿತ್ಸೆಯಲ್ಲಿ ಕೈಜೋಡಿಸಿದ ನವಜಾತ ಶಿಶು ವಿಭಾಗದ ಡಾ. ಗುಂಜನ್ ಬಂಗ, ಡಾ. ಗುರುಪ್ರಸಾದ್ ರೈ, ಡಾ. ಅಪೂರ್ವ ಬರ್ಜೆ ತಮ್ಮ ಅನುಭವಗಳನ್ನು ಹಂಚಿಕೊಂಡರು. ಆಸ್ಪತ್ರೆಯ ಮಾರ್ಕೆಟಿಂಗ್ ವಿಭಾಗದ ವ್ಯವಸ್ಥಾಪಕ ಮೋಹನ್ ಶೆಟ್ಟಿ ಸುದ್ದಿಗೋಷ್ಠಿಯನ್ನು ಸಂಯೋಜಿಸಿದರು.

**ಶೇ.4 - 6 ಮಕ್ಕಳಲ್ಲಿ ತೊಂದರೆ:** ನಮ್ಮ ದೇಶದಲ್ಲಿ ಹುಟ್ಟುವ ಶೇ.4- 6 ಮಕ್ಕಳಲ್ಲಿ ಹೃದಯ ಸಂಬಂಧಿ ಕಾಯಿಲೆ ಕಂಡುಬರುತ್ತಿದೆ. ಆದರೆ ಅದೆಲ್ಲವೂ ಮಾರಣಾಂತಿಕವಲ್ಲ, ಮಕ್ಕಳಲ್ಲಿ ಈ ತೊಂದರೆಗೆ ನಿರ್ದಿಷ್ಟ ಕಾರಣಗಳಲ್ಲ, ಗ್ರಾಮೀಣ ಪ್ರದೇಶದ ಮಕ್ಕಳಲ್ಲಿ ಈ ತೊಂದರ ಹೆಚ್ಚಿದೆ. ಕೆಎಂಸಿಯಲ್ಲಿ ಗರ್ಭಾವಸ್ಥೆಯಲ್ಲಿಯೆ ಈ ಕಾಯಿಲೆಗಳನ್ನು ಪತ್ತೆ ಮಾಡುವ ವಿಶ್ವದರ್ಜೆಯ ವ್ಯವಸ್ಥೆ ಇದೆ. ಆದ್ದರಿಂದ ಮಕ್ಕಳು ಹುಟ್ಟಿದ ತಕ್ಷಣ ಸೂಕ್ತ ಚಿಕಿತ್ಸೆ ನೀಡಿ, ಮಕ್ಕಳ ಮರಳ ಪ್ರಮಾಣವನ್ನು ಕಡಿಮೆ ಮಾಡಬಹುದಾಗಿದೆ ಎಂದು ಡಾ.ಗುಂಜನ್ ಬಂಗಾ ಹೇಳಿದರು.

KASTURBA HOSPITAL MANIPAL

ಕಸ್ತೂರ್ಬಾ ಆಸ್ಪತ್ರೆ ಹೊಂದಿದೆ ಎಂದು ಆಸ್ಪತ್ರೆಯ ವೈದ್ಯಕೀಯ ಅಧೀಕ್ಷಕ ಡಾ. ಅವಿನಾಶ್ ಶೆಟ್ಟಿ ಮಾತನಾಡಿದರು.

**ಅನವಶ್ಯಕ ಗಾಬರಿ ಬೇಡ**

ಸಿನಿಮಾ ನಟ ಪುನಿತ್ ರಾಜ್‌ಕುಮಾರ್ ಅವರು ಹೃದ್ರೋಗದಿಂದ ನಿಧನರಾದ ಮೇಲೆ ಆಸ್ಪತ್ರೆಗೆ ಬಂದು ಹೃದಯ ಪರೀಕ್ಷೆ ಮಾಡಿಸಿಕೊಳ್ಳುವವರ ಸಂಖ್ಯೆ ಶೇ 30 - 40ರಷ್ಟು ಹೆಚ್ಚಾಗಿದೆ. ಇಂತಹ ಅನವಶ್ಯಕ ಹೆದರಿಕೆ ಬೇಕಾಗಿಲ್ಲ, ಆದರೆ ಹೃದ್ರೋಗದ ಲಕ್ಷಣಗಳಿದ್ದರೆ ಮಾತ್ರ ತಕ್ಷಣ ಪರೀಕ್ಷೆ ಮಾಡಿಸಿಕೊಳ್ಳಬೇಕು. ಅಲ್ಲದೆ ವಿಪರೀತ ವ್ಯಾಯಾಮ ಮಾಡದೆ, ಲಘುವಾದ ವ್ಯಾಯಾಮವಷ್ಟೇ ಮಾಡಬೇಕು ಎಂದು ಡಾ.ಪದ್ಮಕುಮಾರ್ ಹೇಳಿದರು.

ಕನ್ನಡಪ್ರಭ Sat, 04 December 2021
https://kpepaper.asianetnews.com/c/64739178

## Other Links:

Karavali Xpress: https://karavalixpress.com/news/kv-3/

Public Next: https://publicnext.com/article/nid/Udupi/Health-and-Fitness/node=569826

Daijiworld : https://daijiworld.com/news/newsDisplay?newsID=900447

Udupi Times: https://udupitimes.com/udupi-times-7069/

Udupi Bulletin: https://nammaudupibulletin.com/suddigalu/pradeshika/complex-and-critical-paediatric-cardiac-surgeries-successfully-performed-at-kmc/

Udupi Xpress: https://udupixpress.com/successful-pediatric-complex-heart-surgery-at-manipal-kmc/